# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1227
ಸದಸ್ಯರ ಹೆಸರು : ಶ್ರೀ ರಿಜ್ವಾನ್ ಅರ್ಷದ್
ಉತ್ತರಿಸುವ ದಿನಾಂಕ: : 21-12-2018
ಉತ್ತರಿಸುವವರು : ಮಾನ್ಯ ಉಪ ಮುಖ್ಯಮಂತ್ರಿಯವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಮಟ್ಟದಲ್ಲಿಯೇ ಕಸ ಸಂಸ್ಕರಣೆ ಮಾಡುವ ಬಗ್ಗೆ 2012ರ ಕೌನ್ಸಿಲ್ ಸಭೆಯಲ್ಲಿ ಅನುಮೋದನೆಯಾಗಿದ್ದು, ಈವರೆಗೂ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸದಿರಲು ಕಾರಣಗಳೇನು; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾರ್ಡ್ ಮಟ್ಟದಲ್ಲಿಯೇ ತ್ಯಾಜ್ಯ ಸಂಸ್ಕರಣೆ ಮಾಡುವ ಬಗ್ಗೆ ಬಯೋ ಮಿಥೈನೈಸೇಷನ್ ಪ್ಲಾಂಟ್, ಆರ್ಗ್ಯಾನಿಕ್ ವೇಸ್ಟ್ ಕನ್‌ವರ್ಟರ್ಸ್ ಮತ್ತು ಒಣ ತ್ಯಾಜ್ಯ ಸಂಗ್ರಹಣ ಘಟಕಗಳು, ಲೇನ್ ಕಾಂಪೋಸ್ಟರ್‌ಗಳನ್ನು ಸ್ಥಾಪಿಸುವ ಸಲುವಾಗಿ ವಾರ್ಡ್ ಪರಿಮಿತಿಯಲ್ಲಿ ನಿವೇಶನಗಳನ್ನು ಗುರುತಿಸಲು ಕ್ರಮವಹಿಸಲಾಗಿರುತ್ತದೆ ಹಾಗೂ ಈ ಬಗ್ಗೆ ವಾರ್ಡ್ ಕಮಿಟಿ ಸಭೆಗಳಲ್ಲಿ ವಿಷಯವನ್ನು ಮಂಡಿಸಿ ಸವಿವರವಾಗಿ ಸಾರ್ವಜನಿಕರೊಂದಿಗೆ ಚರ್ಚಿಸಿ ಅಭಿಪ್ರಾಯ ಪಡೆಯಲಾಗಿರುತ್ತದೆ. ಆದರೆ, ಪಾಲಿಕೆಯ ವ್ಯಾಪ್ತಿಯ ವಾರ್ಡ್‌ಗಳ ವಿವಿಧ ಬಡಾವಣೆ ವ್ಯಾಪ್ತಿಯಲ್ಲಿ ಬಹುತೇಕ ಎಲ್ಲಾ ನಿವೇಶನಗಳಲ್ಲಿ ಮನೆ, ನಿರ್ಮಾಣ, ಕಛೇರಿ ಕಟ್ಟಡಗಳು, ವಾಣಿಜ್ಯ ಕಟ್ಟಡಗಳು, ಶಾಲಾ ಕಾಲೇಜುಗಳು, ಪಂಚತಾರಾ ಹೋಟೆಲ್‌ಗಳು, ಆಸ್ಪತ್ರೆಗಳು, ನ್ಯಾಯಾಲಯ ಸಂಕೀರ್ಣಗಳು ಮತ್ತು ಸಾರಿಗೆ ಸಂಕೀರ್ಣಗಳ ಕಟ್ಟಡಗಳಿದ್ದು ಖಾಲಿ ನಿವೇಶನಗಳು ಲಭ್ಯವಿರುವುದಿಲ್ಲವಾಗಿವೆ.<br><br>ಸಾರ್ವಜನಿಕರು ಸಹಾ ವಾರ್ಡ್‌ನ ಪರಿಮಿತಿಯಲ್ಲಿ ಒಣತ್ಯಾಜ್ಯ ಸಂಗ್ರಹಣ ಕೇಂದ್ರಗಳನ್ನು ನಿರ್ಮಿಸಲು ಅಸಹಕಾರ ನೀಡುತ್ತಿರುವ ಪ್ರಯುಕ್ತ ಹಸಿ ತ್ಯಾಜ್ಯ ಸಂಸ್ಕರಣೆಯನ್ನು ವಾರ್ಡ್ ಮಟ್ಟದಲ್ಲಿಯೇ ಮಾಡುವ ಬಗ್ಗೆ ಕೌನ್ಸಿಲ್ ಸಭೆಯ ನಿರ್ಣಯಗಳಂತೆ ಕ್ರಮ ವಹಿಸಲು ಸಾಧ್ಯವಿಲ್ಲದಿರುವ ಬಗ್ಗೆ ವಾರ್ಡ್ ಕಮಿಟಿಗಳು ನಿರ್ಣಯಿಸಿರುತ್ತದೆ. |
| ಆ | ಕೇಂದ್ರೀಕೃತ ವ್ಯವಸ್ಥೆಯ ಬದಲು ಪಾರ್ಕ್, ಮೈದಾನ ಮತ್ತು ರಾಜಕಾಲುವೆಯ ಪಕ್ಕದಲ್ಲಿರುವ ಜಾಗವನ್ನು ವೈಜ್ಞಾನಿಕವಾಗಿ ಪರಿಗಣಿಸಿ ಪ್ರತಿ ವಾರ್ಡ್‌ನಲ್ಲಿ ಸಂಗ್ರಹವಾಗುವ ಹಸಿ ಕಸವನ್ನು ಅಲ್ಲಿಯೇ ಸಂಸ್ಕರಣೆ ಮಾಡಿದರೆ ಕೋಟ್ಯಾಂತರ ರೂಪಾಯಿ ತೆರಿಗೆ ಹಣ ಉಳಿಯಬಹುದಲ್ಲವೇ; ತೆರಿಗೆ ಹಣ ಉಳಿತಾಯ ಮಾಡುವ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ; ಈ ಬಗ್ಗೆ ಸ್ಪಷ್ಟ ನಿರ್ಧಾರವೇನು; (ಪೂರ್ಣ ವಿವರ ನೀಡುವುದು). | |
| ಇ | 2012 ರಿಂದ ಹಸಿ ಕಸ ಸಾಗಾಣಿಕೆಗೆ ಪ್ರತಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ; ಅನುಮೋದನೆ ಪಡೆದು ಈವರೆಗೂ ಪೂರ್ಣ ಜಾರಿಯಾಗದಿರುವುದರಿಂದ ಆದಂತಹ ಖರ್ಚಿಗೆ ಹೊಣೆಗಾರರು ಯಾರು? (ಸಂಪೂರ್ಣ ಮಾಹಿತಿ ನೀಡುವುದು). | 2012 ರಿಂದ ಇದೂವರೆವಿಗೂ ಒಟ್ಟಾರೆಯಾಗಿ ಹಸಿ ತ್ಯಾಜ್ಯ ಸಾಗಾಣಿಕೆಗೆ ಒಟ್ಟು ರೂ. 2,505.00 ಲಕ್ಷಗಳನ್ನು ಖರ್ಚು ಮಾಡಲಾಗಿರುತ್ತದೆ ವಿವರಗಳನ್ನು **ಅನುಬಂಧದಲ್ಲಿ** ನೀಡಿದೆ.<br>ಪ್ರತಿ ವಾರ್ಡ್ ಹಂತದಲ್ಲಿ ತ್ಯಾಜ್ಯ ಸಂಗ್ರಹಣೆ, ಸಾಗಾಣಿಕೆ ಹಾಗೂ ವಿಲೇವಾರಿಗೆ ನಿಗದಿಪಡಿಸಲಾದ ಕಾರ್ಯಾದೇಶ / ಸರಬರಾಜು ಆದೇಶದಂತೆ ಖರ್ಚು ಬರಿಸುತ್ತಿದ್ದು, ಹಸಿ ತ್ಯಾಜ್ಯ ಸಾಗಾಣಿಕೆಗಾಗಿ ಪ್ರತ್ಯೇಕ ಸರಬರಾಜು ವ್ಯವಸ್ಥೆಯಿಲ್ಲದ ಕಾರಣ ಒಣ ತ್ಯಾಜ್ಯದೊಂದಿಗೆ ವಿಲೇವಾರಿ ಮಾಡಲಾಗುತ್ತಿದೆ. ನಿಯೋಜಿತ ವಾಹನ ಹಾಗೂ ಸಿಬ್ಬಂದಿಗಳ ಮುಖೇನ ಘನ ತ್ಯಾಜ್ಯದೊಂದಿಗೆ ಹಸಿ ತ್ಯಾಜ್ಯ ಸಾಗಾಣಿಕೆಯನ್ನು ಸಹ ಮಾಡಲಾಗುತ್ತಿರುತ್ತದೆ. 2012ರಿಂದ ಹಸಿ ತ್ಯಾಜ್ಯ ವಿಲೇವಾರಿಗೆ ಪ್ರತ್ಯೇಕವಾಗಿ ಹಣ ಪಾವತಿ ಮಾಡುತ್ತಿರುವುದಿಲ್ಲ.<br><br>2016ರ ಘನ ತ್ಯಾಜ್ಯ ನಿಯಮಗಳನುಸಾರ ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆಗೆ ಕಾನೂನು ರೂಪಿಸಲಾಗಿದ್ದು, ಸಾರ್ವಜನಿಕರಲ್ಲಿ ಈ ಬಗ್ಗೆ ಅರಿವು ಮೂಡಿಸಲು ಶಾಲಾ ಕಾಲೇಜುಗಳಲ್ಲಿ ಜಾಗೃತಿ ಶಿಬಿರಗಳು ಹಾಗೂ ಇನ್ನಿತರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. |

| | | |
|---|---|---|
| | | 2017ನೇ ಸಾಲಿನಲ್ಲಿ ಹಸಿತ್ಯಾಜ್ಯವನ್ನು ಮಾವಳ್ಳಿಪುರ ಸಂಸ್ಕರಣಾ ಘಟಕಕ್ಕೆ ಸಾಗಾಣಿಕೆ ಮಾಡಲಾಗುತ್ತಿತ್ತು, ನಂತರದಲ್ಲಿ 2017-18ನೇ ಸಾಲಿನಿಂದ ಮೆ॥ ಎಂ ಎಸ್ ಜಿ ಪಿ, ದೊಡ್ಡಬಿದರಕಲ್ಲು, ಕನ್ನಹಳ್ಳಿ, ಸೀಗೆಹಳ್ಳಿ, ಕೆಸಿಡಿಸಿ, ಚಿಕ್ಕನಾಗಮಂಗಲ ಸಂಸ್ಕರಣ ಘಟಕಗಳಿಗೆ ಹಸಿ ತ್ಯಾಜ್ಯವನ್ನು ಸಾಗಾಣಿಕೆ ಮಾಡಲಾಗಿರುತ್ತದೆ.<br><br>2017-18ನೇ ಸಾಲಿನಲ್ಲಿ ಈವರೆಗೆ ಸರಾಸರಿಯಾಗಿ ಶೇ. 30% ರಷ್ಟು ವಿಂಗಡಿಸಿದ ಹಸಿ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಣೆ ಮಾಡುವಲ್ಲಿ ಪ್ರಗತಿ ಸಾಧಿಸಲಾಗಿರುತ್ತದೆ. ಇದೇ ಅವಧಿಯಲ್ಲಿ ಪಾಲಿಕೆಯ ವತಿಯಿಂದ ಶೇ. 100% ರಷ್ಟು ವಿಂಗಡಿಸಲಾದ ಹಸಿ ತ್ಯಾಜ್ಯ ಪರಿಮಾಣ ಒಟ್ಟು 1700 ಮೆ॥ ಟನ್ ಸಾಮರ್ಥ್ಯದಷ್ಟಿದ್ದು, ಒಟ್ಟು 7 ಹಸಿ ತ್ಯಾಜ್ಯ ಸಂಸ್ಕರಣೆ ಘಟಕಗಳಲ್ಲಿ ಸಂಸ್ಕರಣೆ ಮಾಡಲಾಗುತ್ತಿದೆ.<br><br>2018 ನೇ ಸಾಲಿನಲ್ಲಿ ಮೆ॥ ಎಂ ಎಸ್ ಜಿ ಪಿ, ದೊಡ್ಡಬಿದರಕಲ್ಲು, ಕನ್ನಹಳ್ಳಿ, ಸೀಗೆಹಳ್ಳಿ, ಕೆಸಿಡಿಸಿ, ಚಿಕ್ಕನಾಗಮಂಗಲ ಲಿಂಗಧೀರನಹಳ್ಳಿ, ಸುಬ್ಬರಾಯನಪಾಳ್ಯ ಘಟಕಗಳಿಗೆ ಹಸಿ ತ್ಯಾಜ್ಯವನ್ನು ಸಾಗಾಣಿಕೆ ಮಾಡಲಾಗಿರುತ್ತದೆ. ಆದ್ದರಿಂದ ಹಸಿ ಕಸ ಸಾಗಾಣಿಕೆಗಾಗಿ ಪ್ರತ್ಯೇಕವಾಗಿ ಖರ್ಚು ಭರಿಸಲಾಗುತ್ತಿರುವುದಿಲ್ಲ. |

**ಸಂಖ್ಯೆ: ನಅಇ 642 ಎಂಎನ್‌ವೈ 2018**

**(ಜಿ. ಪರಮೇಶ್ವರ)**
ಉಪ ಮುಖ್ಯಮಂತ್ರಿಗಳು

ಎಲ್.ಎ. ೭೫/೮ ಪ್ರ.ಸಂ. 1227ಕ್ಕೆ

ಅನುಬಂಧ-

| ಕ್ರ. ಸಂ. | ವಲಯದ ಹೆಸರು | ಹಸಿ ತ್ಯಾಜ್ಯ ಸಾಗಾಣಿಕೆಗೆ ಪ್ರತಿ ವಲಯಕ್ಕೆ ಖರ್ಚು ಮಾಡಲಾಗಿರುವ ಮೊತ್ತದ ವಿವರ (ಕೋಟಿಗಳಲ್ಲಿ) | | |
|---|---|---|---|---|
| | | 2016-17 | 2017-18 | 2018-19 |
| 1 | ಪೂರ್ವ | 129.60 | 163.62 | 141.00 |
| 3 | ದಕ್ಷಿಣ | 330.00 | 450.00 | 460.00 |
| 4 | ರಾಜರಾಜೇಶ್ವರಿನಗರ | 40.55 | 56.21 | 37.08 |
| 5 | ಮಹದೇವಪುರ | 29.07 | 29.07 | 29.07 |
| 6 | ಯಲಹಂಕ | 35.41 | 21.67 | 0.68 |
| 7 | ದಾಸರಹಳ್ಳಿ | 141.12 | 141.12 | 58.80 |
| 8 | ಬೊಮ್ಮನಹಳ್ಳಿ | 64.96 | 72.53 | 73.00 |
| ಒಟ್ಟು | | **770.71** | **934.22** | **799.63** |

ಜಂಟಿ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ